# www.karunaduexams.com

## ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್-

## ಡಿಸೆಂಬರ್,22,2017

www.karunaduexams.com

1. 2017ರ ಹಿಂದಿ ಭಾಷೆಯಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಯಾರು ಪಡೆದರು?
   ಅ) ರಮೇಶ ಕುಂತಲ್ ಮೇಘ
   ಆ) ಮಹಮೂದ್ ಅಹ್ಮದ್ ಸಹರ್
   ಇ) ಚಮನ್ ಲಾಲ್
   ಈ) ಮುಲ್ಕ್ ರಾಜ್ ಆನಂದ್
   ರಮೇಶ ಕುಂತಲ್ ಮೇಘ
   ರಮೇಶ ಕುಂತಲ್ ಮೇಘ ಅವರಿಗೆ ಸಾಹಿತ್ಯ ವಿಮರ್ಶೆ "ವಿಶ್ ಸಾರಿತ್ ಸಾಗರ್" ನ ಹಿಂದಿ ಸಾಹಿತ್ಯಕ್ಕಾಗಿ 2017ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಲಾಗಿದೆ. ಫೆಬ್ರುವರಿ 12, 2018 ರಂದು ವಿಶೇಷ ಕಾರ್ಯದಲ್ಲಿ ರಮೇಶ ಕುಂತಲ್ ಮೇಘ ಅವರಿಗೆ, ಕೆತ್ತನೆ ಮಾಡಿದ ತಾಮ್ರದ ಫಲಕ, ಒಂದು ಶಾಲು ಮತ್ತು ಒಂದು ಲಕ್ಷ ರೂ. ಚೆಕ್ ಹೊಂದಿರುವ ಕ್ಯಾಸ್ಕೆಟ್ ರೂಪದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

2. ಯಾವ ಕೇಂದ್ರ ಸಚಿವರು ಗ್ರಾಮೀಣ ಗ್ರಾಹಕರ ಅಂಚೆ ಸೇವೆಗಳ ಮಟ್ಟವನ್ನು ಸುಧಾರಿಸಲು "ದಾರ್ಪಾನ್ – ಎ ನ್ಯೂ ಇಂಡಿಯಾ" ಎಂಬ ಯೋಜನೆಯನ್ನು ಪ್ರಾರಂಭಿಸಿದರು?
   ಅ) ಡಿ.ವಿ. ಸದಾನಂದ ಗೌಡ
   ಆ) ನರೇಂದ್ರ ಮೋದಿ
   ಇ) ಮನೋಜ್ ಸಿನ್ಹಾ
   ಈ) ನರೇಂದ್ರ ಸಿಂಗ್ ತೋಮರ್
   ಮನೋಜ್ ಸಿನ್ಹಾ
   ಡಿಸೆಂಬರ್ 21, 2017 ರಂದು ನವದೆಹಲಿಯಲ್ಲಿ "ದಾರ್ಪಾನ್ – ಎ ನ್ಯೂ ಇಂಡಿಯಾ" ಎಂಬ ಯೋಜನೆಯನ್ನು ಕೇಂದ್ರ ಸಚಿವ ಮನೋಜ್ ಸಿನ್ಹಾ ಪ್ರಾರಂಭಿಸಿದರು.

3. ಇಂಗ್ಲೀಷ್ ಭಾಷೆಯಲ್ಲಿ ಮಾಮಂಗ್ ಡೈ ಅವರು 2017ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದರು. ಅವರು ಯಾವ ರಾಜ್ಯದವರು?
   ಅ) ಪಶ್ಚಿಮ ಬಂಗಾಳ
   ಆ) ಅರುಣಾಚಲ ಪ್ರದೇಶ
   ಇ) ತ್ರಿಪುರ
   ಈ) ನಾಗಾಲ್ಯಾಂಡ್
   ಅರುಣಾಚಲ ಪ್ರದೇಶ
   ಮಾಮಂಗ್ ಡೈ ಅವರು ಇಟಾನಗರ್ ಮೂಲದ ಲೇಖಕ ಮತ್ತು ಪತ್ರಕರ್ತ, ತಮ್ಮ 2014 ರ ಕಾದಂಬರಿ "ದಿ ಬ್ಲ್ಯಾಕ್ ಹಿಲ್" ಗಾಗಿ ಇಂಗ್ಲೀಷ್ ಭಾಷೆಯಲ್ಲಿ 2017ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದರು. ಈ ಕಾದಂಬರಿಯು ಈಶಾನ್ಯ ಭಾರತದ ಬುಡಕಟ್ಟು ಜನಾಗಂದವರ ಜೀವನದ ಸ್ವಾಭಾವಿಕ ವಿವರಣೆಯನ್ನು ನೀಡುತ್ತದೆ.

4. ಐಸಿಐಸಿಯ ಈ ವರ್ಷದ ಒಡಿಐ ಮತ್ತು ಟ್ವೆಂಟಿ 20 ತಂಡಗಳಲ್ಲಿ ಕಾಣಿಸಿಕೊಳ್ಳುವ ಏಕೈಕ ಭಾರತೀಯ ಮಹಿಳಾ ಕ್ರಿಕಟೆಗರು ಯಾರು?
   ಅ) ಝುಲನ್ ಗೋಸ್ವಾಮಿ
   ಆ) ಏಕ್ತಾ ಬಿಶ್ತ್
   ಇ) ಮಿಥಾಲಿ ರಾಜ್
   ಈ) ಹರ್ಮನ್ಪ್ರೀತ್ ಕೌರ್

www.karunaduexams.com

ಏಕ್ತಾ ಬಿಶ್ತ್
2017 ರ ಡಿಸೆಂಬರ್ 21 ರಂದು, International Cricket Council (ICC) ವರ್ಷದ ಮಹಿಳಾ ಏಕದಿನ ಮತ್ತು ಟ್ವೆಂಟಿ 20 ತಂಡಗಳನ್ನು ಘೋಷಿಸಿತು. ಈ ತಂಡಗಳಲ್ಲಿ ಇಂಗ್ಲೆಂಡ್ನ ಹೀದರ್ ನೈಟ್ 50 ಓವರ್ಗಳ ನಾಯಾಕಿಯಾಗಿ ಮತ್ತು 20-ಓವರ್ಗಳ ನಾಯಕಿಯಾಗಿ ವೆಸ್ಟ್ ಇಂಡೀಸ್ನ ಸ್ಟಾಫನಿ ಟೈಲರ್ ಅವರು ಆಯ್ಕೆಯಾಗಿದ್ದಾರೆ.

5. 2022 ರ ಕಾಮನ್ವೆಲ್ತ್ ಕ್ರೀಡಾಕೂಟವನ್ನು ಆತಿಥ್ಯ ವಹಿಸಲು ಅಧಿಕೃತವಾಗಿ ಆಯ್ಕೆಯಾದ ನಗರ ಯಾವುದು?
ಅ) ಡರ್ಬನ್
ಆ) ನವ ದೆಹಲಿ
ಇ) ಬರ್ಮಿಂಗ್ಹ್ಯಾಮ್
ಈ) ಲಂಡನ್
ಬರ್ಮಿಂಗ್ಹ್ಯಾಮ್
ಡಿಸೆಂಬರ್ 21, 2017 ರಂದು ಬರ್ಮಿಂಗ್ಹ್ಯಾಮ್ ನಗರವನ್ನು 2022 ರ ಕಾಮನ್ವೆಲ್ತ್ ಕ್ರೀಡಾಕೂಟದ ಆತಿಥ್ಯ ವಹಿಸಲು ಅಧಿಕೃತವಾಗಿ ಆಯ್ಕೆ ಮಾಡಲಾಗಿದೆ. ಲಂಡನ್ 1934ರ ಮತ್ತು ಮ್ಯಾಂಚೆಸ್ಟರ್ 2002ರ ನಂತರ ಇಂಗ್ಲೆಂಡ್ನಲ್ಲಿ ಮೂರನೇ ಕಾಮನ್ವೆಲ್ತ್ ಕ್ರೀಡಾಕೂಟ ನಡೆಯಲಿದೆ.

6. ಜನವರಿ 2018 ರಿಂದ ತೆರಿಗೆ ಸಂಬಂಧಿತ ಮಾಹಿತಿಯನ್ನು ಹಂಚಿಕೊಳ್ಳಲು ಯಾವ ದೇಶದೊಂದಿಗೆ ಭಾರತ ಒಪ್ಪಂದ ಮಾಡಿಕೊಂಡಿದೆ?
ಅ) ಸ್ವಿಟ್ಜರ್ಲ್ಯಾಂಡ್
ಆ) ಬಹ್ರೇನ್
ಇ) ಟ್ರಿನಿಡಾಡ್ ಮತ್ತು ಟೊಬಾಗೊ
ಈ) ಟುನೀಶಿಯ
ಸ್ವಿಟ್ಜರ್ಲ್ಯಾಂಡ್
ಜನವರಿ 2018 ರಿಂದ ತೆರಿಗೆ ಸಂಬಂಧಿತ ಮಾಹಿತಿಯನ್ನು ಹಂಚಿಕೊಳ್ಳಲು ಸ್ವಿಟ್ಜರ್ಲ್ಯಾಂಡ್ನೊಂದಿಗೆ ಭಾರತ ಒಪ್ಪಂದಕ್ಕೆ ಸಹಿ ಹಾಕಿದೆ. ಅದು ಜನವರಿ 1, 2018 ರಿಂದ ತೆರಿಗೆ ಸಂಬಂಧಿತ ಮಾಹಿತಿಯನ್ನು ಸ್ವಯಂಚಾಲಿತ ಹಂಚಿಗೆ ಅವಕಾಶ ಮಾಡಿಕೊಡಿಕೊಡುತ್ತದೆ.

7. ಭಾರತದ ಮೊದಲ ಮತ್ತು ಏಕೈಕ ವಿನ್ಯಾಸ ವಿಶ್ವವಿದ್ಯಾಲಯ "ವರ್ಲ್ಡ್ ಯೂನಿವರ್ಸಿಟಿ ಆಫ್ ಡಿಸೈನ್ (WUD)"ಯನ್ನು ಯಾವ ರಾಜ್ಯದಲ್ಲಿ ಪ್ರಾರಂಭಿಸಲಾಯಿತು?
ಅ) ಒಡಿಶಾ
ಆ) ಹರಿಯಾಣ
ಇ) ಪಂಜಾಬ್
ಈ) ತಮಿಳುನಾಡು
ಹರಿಯಾಣ
ಭಾರತದ ಮೊದಲ ಮತ್ತು ಏಕೈಕ ವಿನ್ಯಾಸ ವಿಶ್ವವಿದ್ಯಾನಿಲಯ "ವರ್ಲ್ಡ್ ಯೂನಿವರ್ಸಿಟಿ ಆಫ್ ಡಿಸೈನ್ (WUD)" ವನ್ನು ಹರಿಯಾಣದ ಸೋನಿಪತ್ನಲ್ಲಿ ಪ್ರಾರಂಭಿಸಲಾಯಿತು.

www.karunaduexams.com

8. ದೇಶಾದ್ಯಂತ ವಿದ್ಯಾರ್ಥಿಗಳಿಗೆ ಭಾರತೀಯ ವಿದೇಶಾಂಗ ನೀತಿಯನ್ನು ತರಲು ಕೇಂದ್ರದ ವಿದೇಶಾಂಗ ವ್ಯವಹಾರಗಳ ಸಚಿವಾಲಯ(MEA)ವು ಯಾವ ಕಾರ್ಯಕ್ರಮವನ್ನು ಪ್ರಾರಂಭಿಸಿದೆ?
ಅ) SAMVARTI
ಆ) SAMVEDA
ಇ) SAMPARK
ಈ) SAMEEP
SAMEEP
ದೇಶಾದ್ಯಂತ ವಿದ್ಯಾರ್ಥಿಗಳಿಗೆ ಭಾರತೀಯ ವಿದೇಶಾಂಗ ನೀತಿಯನ್ನು ತರಲು ಕೇಂದ್ರದ ವಿದೇಶಾಂಗ ವ್ಯವಹಾರಗಳ ಸಚಿವಾಲಯ (Ministry of External Affairs (MEA))ಯು SAMEEP ಕಾರ್ಯಕ್ರಮವನ್ನು ಪ್ರಾರಂಭಿಸಿದೆ.

9. 2017 ರ ದ್ವಿಪಕ್ಷೀಯ ನೌಕಾ ವ್ಯಾಯಾಮ " ನಸಮ್-ಅಲ್-ಬಹ್ರ್" ಯು ಭಾರತ ಮತ್ತು ಯಾವ ದೇಶಗದ ನಡುವೆ ಆರಂಭವಾಗಿದೆ?
ಅ) ಕತಾರ್
ಆ) ಈಜಿಪ್ಟ್
ಇ) ಪ್ಯಾಲೇಸ್ಟೈನ್
ಈ) ಓಮನ್
ಓಮನ್
2017 ರ ಡಿಸೆಂಬರ್ 17 ರಂದು ವ್ಹಡಮ್ನ ಸೈಡ್ ಬಿನ್ ಸುಲ್ತಾನ್ ನೇವಲ್ ಬೇಸ್ನಲ್ಲಿ 2017 ರ ದ್ವಿಪಕ್ಷೀಯ ನೌಕಾ ವ್ಯಾಯಾಮ "ನಸಮ್-ಅಲ್-ಬಹ್ರ್" ಯು ಭಾರತ ಮತ್ತು ಓಮನ್ ದೇಶಗಳ ನಡುವೆ ಆರಂಭವಾಗಿದೆ. ಭಾರತೀಯ ನೌಕಾಪಡೆಯು ಒಂದು ಜಲಾಂತರ್ಗಾಮಿ, P8I ಉದ್ದ ಕಡಲ ವಿಮಾನವನ್ನು, ಎರಡು ನೌಕಾ ಹಡಗುಗಳನ್ನು-ಐಎನ್ಎಸ್ ಟ್ರೈಕಾಂಡ್ ಮತ್ತು ಐಎನ್ಎಸ್ಸ ಟೆಗ್ಗಳನ್ನು ದ್ವಿಪಕ್ಷೀಯ ವ್ಯಾಯಾಮಕ್ಕಾಗಿ ನಿಯೋಜಿಸಿದೆ.

10. 2018 ರ ವ್ಯವಹಾರಕ್ಕಾಗಿ ಫೋರ್ಬ್ಸ್ನ ಅತ್ಯುತ್ತಮ ರಾಷ್ಟ್ರಗಳ ಪಟ್ಟಿಯಲ್ಲಿ ಯಾವ ದೇಶವು ಅಗ್ರಸ್ಥಾನ ಪಡೆದಿದೆ?
ಅ) ಸ್ವೀಡನ್
ಆ) ಯುನೈಟೆಡ್ ಕಿಂಗ್ಡಮ್
ಇ) ಕೆನಡಾ
ಈ) ನ್ಯೂಜಿಲೆಂಡ್
ಯುನೈಟೆಡ್ ಕಿಂಗ್ಡಮ್
2018 ರ ವ್ಯವಹಾರಕ್ಕಾಗಿ ಫೋರ್ಬ್ಸ್ನ ಅತ್ಯುತ್ತಮ ರಾಷ್ಟ್ರಗಳ ಪಟ್ಟಿಯಲ್ಲಿ ಯುನೈಟೆಡ್ ಕಿಂಗ್ಡಮ್ ಅಗ್ರಸ್ಥಾನ ಪಡೆದಿದೆ. ಯುನೈಟೆಡ್ ಕಿಂಗ್ಡಮ್, 2016 ರಲ್ಲಿ 5 ನೇ ಸ್ಥಾನದಲ್ಲಿತ್ತು ನಂತರ ಫೋರ್ಬ್ಸ್ನ 12 ನೇ ವಾರ್ಷಿಕ ಸಮೀಕ್ಷೆಯಲ್ಲಿ ಈ ದೇಶವು ಮೊದಲ ಸ್ಥಾನ ಪಡೆದಿದೆ.

www.karunaduexams.com